**ಅಸಲು ದಾವಾ ನಂಃ 90/2022**
**ಡಿ.ಡಬ್ಲ್ಯೂಃ 1,**

**ದಿನಾಂಕ :16-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ. ಎಸ್. ಎ. ಕೆ. ವಾದಿ ಪರ ವಕೀಲರಿಂದ :**

ಈ ಕೇಸಿನ ವಾದಿ ಪ್ರತಿವಾದಿ ನಂ -2 ಮತ್ತು 3 ರವರ ಅಣ್ಣ ಎಂದರೆ ಸರಿ. ವಾದಿ ನನ್ನ ಗಂಡನ ತಮ್ಮನ ಮಗ. ವಾದಿಯ ಅಪ್ಪ ಗಂಗಾಧರ, ಗಂಗಾಧರನ ತಂದೆಯ ಹೆಸರು ಹಣಮಂತರಾಯ, ಗಂಗಾಧರನ ತಾಯಿ ಹೆಸರು ಪಾರ್ವತಿ. ಹಣಮಂತರಾಯ ಇವರು ಪಾರ್ವತಿ ಇವರ ಜೊತೆ ಮದುವೆ ಮಾಡಿಕೊಳ್ಳುವ ಮುಂಚೆ ಅಣೆಮ್ಮ ಇವರನ್ನು ಮದುವೆ ಮಾಡಿಕೊಂಡಿದ್ದರು. ನನ್ನ ಗಂಡನ ಹೆಸರು ಯಶವಂತರಾವ, ಅವರ ತಾಯಿ ಹೆಸರು ಅಣೆಮ್ಮ, ತಂದೆ ಹೆಸರು ಹಣಮಂತರಾಯ. ಪಾರ್ವತಿಗೆ ಗಂಗಾಧರ, ಬಾಬುರಾವ, ಪ್ರಭುರಾವ, ಅಪ್ಪಾರಾವ, ಮನ್ಮಥ, ನೀಲಮ್ಮ, ಸಂಗಮ್ಮ, ಶರಣಮ್ಮ ಮಕ್ಕಳು ಎಂದರೆ ಸರಿ. ಹಣಮಂತರಾಯ ಇವರು ಮೊದಲನೆ ಹೆಂಡತಿ ಅಣೆಮ್ಮ ತೀರಿ ಹೋದ ನಂತರ ಪಾರ್ವತಿಯನ್ನು ಮದುವೆ ಮಾಡಿಕೊಂಡು 8 ಮಕ್ಕಳನ್ನು ಜನಿಸಿದರು. ನನಗೆ ಮತ್ತು ಯಶವಂತರಾವಗೆ ಯಾವುದೆ ಮಕ್ಕಳು ಇಲ್ಲಾ, ನನ್ನ ಗಂಡ 2007 ರಲ್ಲಿ ತೀರಿ ಹೋದರು. ಈ ದಾವಾ ಆಸ್ತಿ ಬಿಟ್ಟು ಹಣಮಂತರಾಯ ಇವರಿಗೆ ಮಾವಿನಸೂರ ಮತ್ತು ಶೆಳ್ಳಗಿ ಗ್ರಾಮದಲ್ಲಿ ನೂರಾರು ಎಕರೆ ಆಸ್ತಿಗಳು ಇದ್ದವು ಎಂದರೆ ಸರಿ. ಶೆಳ್ಳಗಿ ಗ್ರಾಮದಲ್ಲಿ ಸ.ನ. 40 ರ 28 ಎಕರೆ 24 ಗುಂಟೆ ಇದೆ ಎಂದರೆ ಸರಿ. ಮಾವಿನಸೂರದಲ್ಲಿ 100 ಎಕರೆಕ್ಕಿಂತ ಹೆಚ್ಚಿಗೆ ಇದೆ ಎಂದರೆ ಸರಿ. ಹಣಮಂತರಾವ ಇವರು 1954 ರಲ್ಲಿ ಮಾವಿನಸೂರ ಗ್ರಾಮದಲ್ಲಿರುವ ಜಮೀನನ್ನು

**ಅಸಲು ದಾವಾ ನಂಃ 90/2022**
**ಡಿ.ಡಬ್ಲ್ಯೂಃ 1,**

ಬಾಬುರಾವ, ಪ್ರಭುರಾವ, ಅಪ್ಪಾರಾವ, ಮನ್ಮಥರಾವ ಇವರಿಗೆ ತಲಾ 20 ಎಕರೆ ಯಂತೆ ಹಂಚಿಕೊಟ್ಟರು ಎಂದರೆ ಸರಿ. ನೀಲಮ್ಮ, ಶರಣಮ್ಮ, ಸಂಗಮ್ಮ, ಇವರಿಗೆ ಮದುವೆ ಕಾಲಕ್ಕೆ ಖರ್ಚವು ಮಾಡಿ ಬೆಳ್ಳೀ, ಬಂಗಾರ ಹಾಕಿದ ಕಾರಣ ಅವರಿಗೆ ಯಾರಿಗೂ ಪಾಲು ಕೊಟ್ಟಿಲ್ಲಾ ಎಂದರೆ ಸರಿ. ಅವರ ಒಪ್ಪಿಗೆ ಮೇರೆಗೆ ಬಾಬುರಾವ, ಪ್ರಭುರಾವ, ಅಪ್ಪಾರಾವ, ಮನ್ಮಥರಾವ ಇವರಿಗೆ ತಲಾ 20 ಎಕರೆ ಯಂತೆ ಪಾಲು ಮಾಡಿ ಕೊಟ್ಟಿದ್ದಾರೆ ಎಂದರೆ ಸರಿ. ಶೆಳ್ಳಗಿ ಗ್ರಾಮದ ಸ.ನ. 40 ರಲ್ಲಿ 28 ಎಕರೆ 24 ಗುಂಟೆ ವಾದಿಯ ತಂದೆ ಗಂಗಾಧರ ಇವರಿಗೆ 1973 ರಲ್ಲಿ ಪಾಲು ಮಾಡಿಕೊಟ್ಟಿದ್ದಾರೆ ಎಂದರೆ ಸರಿ. ನನಗೆ ಮತ್ತು ನನ್ನ ಗಂಡನಿಗೆ ಮಕ್ಕಳು ಇರದ ಕಾರಣ ಯಾವುದೇ ಪಾಲು ಮಾಡಿಕೊಟ್ಟಿಲ್ಲಾ ಎಂದರೆ ಸರಿ. ಹಣಮಂತರಾವ ತೀರಿ ಹೋದ ನಂತರ ವಾದಿಯ ತಂದೆ ಗಂಗಾಧರ ಇವರ ನನ್ನ ಗಂಡ ಮತ್ತು ಗಂಗಾಧರ ಇವರ ಸಂಬಂಧ ಚೆನ್ನಾಗಿ ಇರಲಿ ಎಂದು ಗಂಗಾಧರ ಇವರು 14 ಎಕರೆ 12 ಗುಂಟೆ ನನ್ನ ಗಂಡನಿಗೆ ನೀಡಿದರು ಎಂದರೆ ಸರಿಯಲ್ಲ. ನನ್ನ ಗಂಡ ಸ.ನ. 40 ರಲ್ಲಿ 7 ಎಕರೆ 6 ಗುಂಟೆ ಮತ್ತು 7 ಎಕರೆ 6 ಗುಂಟೆ ದುಶ್ಚಟಕ್ಕೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಮಾರಾಟ ಮಾಡಿದ್ದಾರೆ ಆದರೆ ಯಾವುದೇ ದುಶ್ಚಟಕ್ಕೆ ಮಾರಾಟ ಮಾಡಿಲ್ಲಾ ನಮ್ಮ ಅಡಚಣೆಗೋಸ್ಕರ ಮಾರಾಟ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಸ.ನ. 40 ರಲ್ಲಿ ಉಳಿದ 14 ಎರಕೆ 12 ಗುಂಟೆ ವಾದಿ ಹೆಸರಿಗೆ ಮುಟೇಶನ ಆಗಿ ಪಹಣಿ ಇದೆ ಎಂದರೆ ಸರಿ. ಅದು ಪೋಡಿ ಆಗಿ ಹೊಸ ಸ.ನ. 40/3 ಆಗಿದೆ ಎಂದರೆ ಸರಿ. ಸ.ನ. 15/1 ಮತ್ತು 15/3 ಗಂಗಾಧರ ಸಾಯವಕ್ಕಿಂತ ಮುಂಚೆ

**ಅಸಲು ದಾವಾ ನಂಃ 90/2022**
**ಡಿ.ಡಬ್ಲ್ಯೂಃ 1,**

ಅವರೇ ಸ್ವಾಧೀನದಲ್ಲಿ ಇದ್ದು ಅವರೇ ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ಗಂಗಾಧರ ಇವರು 1973 ರಲ್ಲಿ ತೀತಿ ಹೋದರ ಎಂದರೆ ಸರಿ. ಅವರ ಹೆಂಡತಿ 2016 ರಲ್ಲಿ ತೀರಿ ಹೋದರು ಎಂದರೆ ಸರಿ. ಗಂಗಾಧರ ತೀರಿ ಹೋದ ನಂತರ ನನ್ನ ಗಂಡ ಮತ್ತು ವಾದಿ ಹೆಸರು ಸಾಂಕೇತಿಕವಾಗಿ ಪಹಣಿಯಲ್ಲಿ ಹೆಸರು ಇವೆ ಎಂದರೆ ಸರಿ. ಸ.ನ. 15/1 ರಲ್ಲಿ 4 ಎಕರೆ, ಮತ್ತು ಸ.ನ. 15/3 ರಲ್ಲಿ 1 ಎಕರೆ 2 ಗುಂಟೆ ಜಮೀನು ವಾದಿ ಹೆಸರಿಗೆ ತೋರಿಸುತ್ತದೆ ಎಂದರೆ ಸರಿ. ಅದೇ ರೀತಿ ಸ.ನ. 15/3 ರಲ್ಲಿ 5 ಎಕರೆ ನನ್ನ ಗಂಡನ ಹೆಸರಿಗೆ ತೋರಿಸುತ್ತದೆ ಎಂದರೆ ಸರಿ. ವಾದಿ ಮತ್ತು ನನ್ನ ಗಂಡನ ನಡುವೆ ಯಾವುದೆ ಪಾಲು ಆಗಿಲ್ಲಾ ಸಾಂಕೇತಿಕಗಾವಿ ಇಬ್ಬರು ಹೆಸರು ಪಹಣಿಯಲ್ಲಿದೆ ಎಂದರೆ ನನಗೆ ಗೊತ್ತಿಲ್ಲಾ. ದಾವಾ ಆಸ್ತಿಯಲ್ಲಿ ಯಾವುದೇ ಹಕ್ಕು ಇಲ್ಲಾ, ಅದು ಸಾಂಕೇತಿಕವಾಗಿ ನನ್ನ ಗಂಡನ ಹೆಸರಿನಲ್ಲಿದೆ ಎಂದರೆ ಸರಿಯಲ್ಲ.

**( ಈ ಹಂತದಲ್ಲಿ ವಾದಿ ಪರ ವಕೀಲರು ಹೆಚ್ಚಿನ ಪಾಟಿ ಸವಾಲಿಗಾಗಿ ಸಮಯ ಕೋರಿದ್ದು, ಪಾಟಿ ಸವಾಲು ಮುಂದೂಡಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**